# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1217

2 ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)

3 ಉತ್ತರಿಸುವ ದಿನಾಂಕ : 13.03.2026

4 ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರು

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ವಾರ್ಷಿಕ ಯೋಜನೆಯಡಿ ಅನುಮೋದಿತವಾಗಿರುವ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವಿಳಂಬಕ್ಕೆ ಕಾರಣಗಳೇನು ಮತ್ತು ಇದನ್ನು ಸರಿಪಡಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; | -ಇಲ್ಲ-<br><br>ಆದರೆ, ಕರ್ನಾಟಕ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ವಿಳಂಬವಾಗುತ್ತಿದೆ ಎಂಬ ದೂರು ಬಂದ ಹಿನ್ನಲೆಯಲ್ಲಿ ಕಾಮಗಾರಿಗಳ ಅನುಷ್ಠಾನಕ್ಕೆ ಕಾಲಮಿತಿಯನ್ನು ನಿಗಧಿಪಡಿಸಿ ದಿನಾಂಕ:11.02.2026 ರಂದು ಆದೇಶ ನೀಡಲಾಗಿದೆ. ಸದರಿ ಆದೇಶದ ಪ್ರತಿಯನ್ನು ಲಗತ್ತಿಸಿದೆ. |
| (ಆ) | ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾ ಯೋಜನೆಗಳ ಪ್ರಗತಿಯ ಕುರಿತು ಸಮಗ್ರ ವರದಿ ಸರ್ಕಾರದ ಬಳಿ ಇದೆಯೇ; ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆಯೇ; (ವಿವರ ನೀಡುವುದು) | 2026-27ನೇ ಸಾಲಿನ ಜಿಲ್ಲಾ ವಾರ್ಷಿಕ ಕರಡು ಅಭಿವೃದ್ಧಿ ಯೋಜನೆಗಳನ್ನು ಚಿತ್ರದುರ್ಗ, ಕೋಲಾರ, ದಾವಣಗೆರೆ, ಗದಗ, ಬಳ್ಳಾರಿ, ವಿಜಯನಗರ, ಧಾರವಾಡ ಜಿಲ್ಲೆಗಳಲ್ಲಿ ಜಿಲ್ಲಾ ಯೋಜನಾ ಸಮಿತಿ ಮೂಲಕ ಸಲ್ಲಿಸಲಾಗಿರುತ್ತದೆ. ಉಳಿದ 24 ಜಿಲ್ಲೆಗಳಿಂದ ಮುಂಗಡ ಸಾಫ್ಟ್ ಪ್ರತಿಗಳು ಸ್ವೀಕೃತಿಯಾಗಿರುತ್ತವೆ. ದಿನಾಂಕ:18.02.2026 ರವರೆಗೆ ಸ್ವೀಕರಿಸಲಾದ ಪ್ರಸ್ತಾವನೆಗಳನ್ನು ಕ್ರೋಡೀಕರಿಸಲಾಗಿದ್ದು, ಒಟ್ಟು ಅಂದಾಜು ಬೇಡಿಕೆ **ರೂ.168846.51 ಕೋಟಿಗಳ** ಪ್ರಸ್ತಾವನೆ ಸ್ವೀಕೃತಿಯಾಗಿರುತ್ತದೆ.<br><br>ರಾಜ್ಯ ಸರ್ಕಾರವು ಹಿಂದುಳಿದ ಜಿಲ್ಲೆಗಳಿಗೆ ಯಾವುದೇ ವಿಶೇಷ ಅಭಿವೃದ್ಧಿ ಯೋಜನೆಯನ್ನು ನಿರೂಪಿಸಿರುವುದಿಲ್ಲ.<br><br>ಆದರೆ, ಹಿಂದುಳಿದ ಜಿಲ್ಲೆಗಳಲ್ಲಿರುವ ತಾಲ್ಲೂಕುಗಳ ಹಿಂದುಳಿದಿರುವಿಕೆಯನ್ನು ಆಧರಿಸಿ ಅತ್ಯಂತ, ಅತೀ ಮತ್ತು ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಡಾ|| ಡಿ. ಎಂ. ನಂಜುಂಡಪ್ಪ ರವರ ಶಿಫಾರಸ್ಸಿನನ್ವಯ 2007-08 ರಿಂದ 2024-25ರವರೆಗೆ ವಿಶೇಷ ಅಭಿವೃದ್ಧಿ ಯೋಜನೆಯನ್ನು ರೂಪಿಸಿ, ಅನುಷ್ಠಾನಗೊಳಿಸಲಾಗಿದೆ.<br><br>2025-26ನೇ ಸಾಲಿನಲ್ಲಿ ಡಾ|| ಡಿ. ಎಂ. ನಂಜುಂಡಪ್ಪ ರವರ ವರದಿಯು 23 ವರ್ಷಗಳಷ್ಟು ಹಳೆಯದಾಗಿದ್ದ ಕಾರಣ ಪ್ರೊ. ಎಂ. ಗೋವಿಂದ ರಾವ್ ರವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯನ್ನು |

| | | |
|---|---|---|
| | | ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ:31.01.2026ರಂದು ಮಾನ್ಯ ಮುಖ್ಯ ಮಂತ್ರಿಯವರಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ದಿನಾಂಕ:26.02.2026 ರಂದು ಸಚಿವ ಸಂಪುಟವು ಅಂಗೀಕರಿಸಿ, ವಿಧಾನ ಮಂಡಲದಲ್ಲಿ ಮಂಡಿಸಲು ಅನುಮೋದನೆ ನೀಡಲಾಗಿದೆ. ವರದಿಯನ್ನು ವಿಧಾನ ಮಂಡಲದಲ್ಲಿ ಮಂಡಿಸಿದ ನಂತರ ರಾಜ್ಯ ಸರ್ಕಾರವು ಜಿಲ್ಲೆ/ತಾಲ್ಲೂಕುಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲಾಗುತ್ತದೆ. |
| (ಇ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಯೋಜನಾ ಇಲಾಖೆಯಿಂದ ಬಿಡುಗಡೆ ಮಾಡಲಾದ ಅನುದಾನ ಮತ್ತು ಬಳಸಲಾದ ಅನುದಾನ ಎಷ್ಟು; (ಇಲಾಖೆವಾರು ವಿವರಗಳನ್ನು ನೀಡುವುದು) | ರಾಜ್ಯ ಯೋಜನಾ ಇಲಾಖೆಯಿಂದ ಯಾವುದೇ ಇಲಾಖೆಗಳಿಗೆ ಅನುದಾನ ಬಿಡುಗಡೆ ಮಾಡುವುದಿಲ್ಲ. |
| ಈ) | ರಾಜ್ಯದಲ್ಲಿ ಡೇಟಾ ಆಧಾರಿತ ಯೋಜನೆ ರೂಪಣೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ಈ ಸಂಬಂಧ ಯಾವ ಡಿಜಿಟಲ್ ವೇದಿಕೆಗಳನ್ನು ಅಳವಡಿಸಲಾಗಿದೆ? | ಯೋಜನಾ ಇಲಾಖೆಯ ವ್ಯಾಪ್ತಿಗೆ ಅನ್ವಯಿಸುವುದಿಲ್ಲ.<br><br>ರಾಜ್ಯದಲ್ಲಿ ಬಳಸಲಾಗುತ್ತಿರುವ ಪ್ರಮುಖ ಡಿಜಿಟಲ್ ವೇದಿಕೆಗಳು ಕೆಳಕಂಡಂತಿವೆ.<br><br>ಅ) ಕರ್ನಾಟಕ ಮುಕ್ತ ದತ್ತಾಂಶ ಉಪಕ್ರಮ (KODI) ಕರ್ನಾಟಕ ಓಪನ್ ಡೇಟಾ ಪೋರ್ಟಲ್<br><br>ಆ) K-GIS / K-GIS 2.0<br><br>ಇ) KSSDI ಜಿಯೋ ಪೋರ್ಟಲ್<br><br>ಈ) ವಿವಿಧ ಡ್ಯಾಶ್ಬೋರ್ಡ್ ಮತ್ತು ಮಾನಿಟರಿಂಗ್ ಪ್ಲಾಟ್ಫಾರ್ಮ್‌ಗಳು |

**ಸಂಖ್ಯೆ: ಪಿಡಿಎಸ್/ 04/ಐಪಿಆರ್/2026**

(ಡಿ. ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು

ಸಂಖ್ಯೆ: ಪಿಡಿಎಸ್ 170 ಕೆಎಲ್ಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:11.02.2026.

## ಅಧಿಕೃತ ಜ್ಞಾಪನ

**ವಿಷಯ:** ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಮೇ-2014 ಕ್ಕೆ ಸೇರ್ಪಡೆ ಮಾಡುವ ಬಗ್ಗೆ.

****

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರಸ್ತಾಪಿತ ಕಾಮಗಾರಿಗಳನ್ನು ನಿಗದಿತ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು, ಕೆಲ್ಯಾಡ್ಸ್ ಪರಿಷ್ಕೃತ ಮಾರ್ಗಸೂಚಿ, ಮೇ- 2014 ಕ್ಕೆ ಈ ಕೆಳಕಂಡ ಅಂಶವನ್ನು ಸೇರ್ಪಡೆ ಮಾಡಲಾಗಿದೆ.

| ಕ್ರ ಸಂ | ಹಂತ/ಪ್ರಕ್ರಿಯೆ | ಕಾಲಾವಕಾಶದ ಮಿತಿ (Working Days) |
|---|---|---|
| 1 | ಮಾನ್ಯ ಶಾಸಕರು, ಆರ್ಥಿಕ ವರ್ಷ ಪ್ರಾರಂಭಗೊಂಡ 30 ದಿನಗಳೊಳಗಾಗಿ ಜಿಲ್ಲಾಧಿಕಾರಿ/ ಉಪವಿಭಾಗಾಧಿಕಾರಿಗಳಿಗೆ ರೂ.2.00 ಕೋಟಿಗಳ ಮೊತ್ತಕ್ಕೆ ಕಾಮಗಾರಿಗಳ ಕ್ರಿಯಾ ಯೋಜನೆ/ಪ್ರಸ್ತಾವನೆ ಸಲ್ಲಿಸುವುದು. | ಕಾರ್ಯನಿರತ 30 ದಿನಗಳು (30ನೇ ಏಪ್ರಿಲ್) |
| 2 | ಸ್ವೀಕೃತ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಜಿಲ್ಲಾಧಿಕಾರಿ/ಉಪವಿಭಾಗಾಧಿಕಾರಿಗಳು ಅನುಮೋದನೆ ನೀಡಿ, ಸಂಬಂಧಪಟ್ಟ EE/AEE/ಅನುಷ್ಠಾನಾಧಿಕಾರಿಗಳಿಗೆ ಅನುಮೋದಿತ ಅಂದಾಜು ಪಟ್ಟಿ ಸಲ್ಲಿಸಲು ಸೂಚಿಸಿ, ರವಾನೆ ಮಾಡುವುದು.(ಬಿಡಿ ಬಿಡಿಯಾಗಿ ಸ್ವೀಕೃತಗೊಂಡಲ್ಲಿ 10 ದಿನಗಳು ಮಾತ್ರ) | ಕಾರ್ಯನಿರತ 30 ದಿನಗಳು |
| 3 | ಸ್ವೀಕೃತ ಕ್ರಿಯಾ ಯೋಜನೆಗೆ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಅಂದಾಜು ಪಟ್ಟಿ ತಯಾರಿಸಿ, ತಾಂತ್ರಿಕ ಅನುಮೋದನೆಗೆ EE/AEE ಗೆ ಸಲ್ಲಿಸುವುದು. | ಕಾರ್ಯನಿರತ 30 ದಿನಗಳು |
| 4 | ಅಂದಾಜು ಪಟ್ಟಿ ಸಿದ್ಧವಾದ ಪ್ರಸ್ತಾವನೆಗಳಿಗೆ EE/AEE ಗಳು ತಾಂತ್ರಿಕ ಅನುಮೋದನೆಗೆ ನೀಡುವುದು. | ಕಾರ್ಯನಿರತ 10 ದಿನಗಳು |
| 5 | ಅನುಷ್ಠಾನಾಧಿಕಾರಿಗಳಿಂದ ಸ್ವೀಕೃತಗೊಂಡ ಅಂದಾಜು ಪಟ್ಟಿ (Estimate) ಗೆ ಜಿಲ್ಲಾಧಿಕಾರಿ/ಉಪ ವಿಭಾಗಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಿ, ಶೇ 75 ರಷ್ಟು ಅನುದಾನ ಬಿಡುಗಡೆ ಮಾಡುವುದು. | ಕಾರ್ಯನಿರತ 15 ದಿನಗಳು |
| 6 | ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು (EE/AEE) ಕಾಮಗಾರಿ ಪ್ರಾರಂಭಿಸಿ ಮುಕ್ತಾಯ ಮಾಡುವುದು (ಅಂದಾಜು ಮೊತ್ತ ರೂ.5.00 ಲಕ್ಷಗಳ ಕಾಮಗಾರಿಗಳು) ಹಾಗೂ ಅಂದಾಜು ಮೊತ್ತ ರೂ.5.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಿಂದ ನಿಗದಿಪಡಿಸಿರುವ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವುದು. (ಟೆಂಡರ್ ನಿಯಮಗಳಂತೆ ಹಾಗೂ ಅಂದಾಜು ಮೊತ್ತ ಆಧರಿಸಿ) | ಕಾರ್ಯನಿರತ 90 ದಿನಗಳು |

| ಕ್ರ ಸಂ | ಹಂತ/ಪ್ರಕ್ರಿಯೆ | ಕಾಲಾವಕಾಶದ ಮಿತಿ (Working Days) |
|---|---|---|
| 7 | ಮೂರನೇ ವ್ಯಕ್ತಿ ತಪಾಸಣೆ ಪೂರ್ಣಗೊಳಿಸಿ ಅಂತಿಮ ಬಿಲ್ಲಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಉಳಿಕೆ ಶೇ 25 ರಷ್ಟು ಅನುದಾನ ಬಿಡುಗಡೆ ಮಾಡುವುದು. | ಕಾರ್ಯನಿರತ 30 ದಿನಗಳು |
| 8 | ಕಾಮಗಾರಿ ಮುಕ್ತಾಯ ಮಾಡಿ ವರದಿ ಸಲ್ಲಿಸುವುದು (ಅನುಷ್ಠಾನ ಏಜೆನ್ಸಿಗಳು) (worksoft ತಂತ್ರಾಂಶದಲ್ಲಿ ಇಂಧೀಕರಿಸುವುದು). | ಕಾರ್ಯನಿರತ 5 ದಿನಗಳು |

[ಮಾನ್ಯ ಯೋಜನಾ ಸಚಿವರಿಂದ
ಅನುಮೋದಿಸಲ್ಪಟ್ಟಿದೆ]

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಿ. ಚಂದ್ರಶೇಖರಯ್ಯ)
ನಿರ್ದೇಶಕರು
ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ/ಲೆಕ್ಕ ಪರಿಶೋಧನೆ-1 ಮತ್ತು 2), ಕರ್ನಾಟಕ ಬೆಂಗಳೂರು-560001.
2. ಎಲ್ಲಾ ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ ಮತ್ತು ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳಿಗೆ (ಜಿಲ್ಲಾಧಿಕಾರಿಗಳ ಕಚೇರಿ ಮುಖೇನ).
3. ಮಾನ್ಯ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು
4. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.